ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 100-110
©IIMRD, Mysuru
IIMRD JOURNALS
www.iimrd.com

# ಕೇದಾರೇಶ್ವರ ದೇವಾಲಯ: ಒಂದು ಐತಿಹಾಸಿಕ ಅವಲೋಕನ

ಡಾ.ಶ್ರೀನಿವಾಸ್.ವಿ[1]

ಪೀಠಿಕೆ:

ಕೇದಾರೇಶ್ವರ ದೇವಾಲಯ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ನಾಗಲಾಪುರ ಹಳ್ಳಿಯಲ್ಲಿ ಕಂಡುಬರುತ್ತದೆ. ಮಾಯಸಂದ್ರದಿಂದ ಸುಮಾರು ೮ ಕಿ. ಮೀ. ದೂರದಲ್ಲಿದೆ. ಹೊಯ್ಸಳರ ಶಿಲ್ಪಕಲೆಯ ಮೆರಗು ಪಡೆದುಕೊಂಡಿದೆ. ಶಿಲ್ಪಿಯು ತನ್ನ ಕಲಾ ಕೌಶಲ್ಯ ಹಾಗೂ ಜಾಣ್ಮೆಯನ್ನು ಉನ್ನತ ಮಟ್ಟದ ಕೆತ್ತನೆಯ ಮುಖಾಂತರ ರೂಪ, ಆಕಾರ, ವರ್ಣ, ರಸಭಂಗಿ, ಸಮನ್ವಯ ಮಾಧುರ್ಯ, ಗಾಂಭೀರ್ಯತೆ ಮುಂತಾದವು ಕಲೆಯ ನಾನಾ ಸ್ತರಗಳಲ್ಲಿ ಮೂಡಿಬಂದಿದೆ. ಕಾಲ ಗರ್ಭದಲ್ಲಿ ಅಡಗಿ ಹೋದ ಹಲವಾರು ಪೌರಾಣಿಕ ಐತಿಹಾಸಿಕ ಘಟನಾವಳಿಗಳನ್ನು ವಾಸ್ತವಾಂಶಗಳ ಪ್ರತಿರೂಪವಾಗಿ ವಿನೂತನ ರೂಪವಾಗಿ ಕಡೆದು ನಿಲ್ಲಿಸಿರುವುದು ಪ್ರತಿಯೊಬ್ಬರ ಮನಸ್ಸನ್ನು ಸೂರೆಗೊಳ್ಳದೆ ಇರಲಾಗದು.

ನಾಗಲಾಪುರ ಹೊಯ್ಸಳ ವಾಸ್ತು ಶಿಲ್ಪ, ಚಿತ್ರ, ಸಾಹಿತ್ಯ,ಸಾಹಸ ಅಭಿನಯದ ವಾಸ್ತವಿಕತೆಗೆ ಅಡಿಗಲ್ಲಾಗಿ ಆಧುನಿಕತೆಗೆ ಸವಾಲಾಗಿ ಶೋಭಮಯವಾಗಿ ವಿಜೃಂಭಿಸುತ್ತದೆ. ಬದುಕಿನ ಪ್ರತಿಯೊಂದು ಅರ್ಥಮೌಲ್ಯ, ಆಕಾರ, ಸೌಂದರ್ಯ, ಸುಖಭೋಗ, ದು:ಖದಮನಗಳನ್ನು ಅಭಿವ್ಯಕ್ತಪಡಿಸುತ್ತದೆ. ಪ್ರತಿಯೊಂದು ಶಿಲ್ಪಕಲೆಯು ಉಳಿಯ ಪೆಟ್ಟು ತಿಂದು ಕಲಾ ಕೌಶಲದಿಂದ ಸುಂದರವಾಗಿ ಪ್ರತಿಬಿಂಬಿಸುತ್ತಿರುವುದನ್ನು ಯಾರು ಬೇಕಾದರು ಬಂದು ವೀಕ್ಷಿಸಬಹುದು.

ನಾಗಲಾಪುರದ ಕೇದಾರೇಶ್ವರ ದೇವಾಲಯ ನಕ್ಷತ್ರಾಕಾರದ ಅಡಿಯಲ್ಲಿ ಸುಂದರವಾಗಿ, ಮನೋಹರವಾಗಿ, ರಮಣೀಯವಾಗಿ, ಕಲಾಮಯವಾಗಿ ಕೆತ್ತಲ್ಪಟ್ಟಿದೆ ಸೂಳೆಕೆರೆಯಲ್ಲಿರುವ ಹೊಯ್ಸಳ ಶೈಲಿಯ ಈಶ್ವರ ದೇವಾಲಯ, ಹೊಸಹಳ್ಳಿಯಲ್ಲಿರುವ ಕಲ್ಲೇಶ್ವರ ದೇವಾಲಯ, ವೀರಭದ್ರಸ್ವಾಮಿ ದೇವಾಲಯಗಳಲ್ಲಿರುವಂತೆ ಅನುಪಮವಾದ ಕೆತ್ತನೆಯ ಕೆಲಸದಿಂದ ಕೂಡಿದೆ ಒಳ ಹೊರಭಾಗಗಳು ಬಹು ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿದೆ. ಈ ದೇವಾಲಯ ಎತ್ತರವಾದ ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಕರ್ನಾಟಕದ ವಾಸ್ತು ಶಿಲ್ಪದಲ್ಲಿ ಈ ರೀತಿಯ ಜಗತಿಯ ಮೇಲೆ ದೇವಾಲಯ ನಿರ್ಮಿಸುವ ಸಂಪ್ರದಾಯ ಹೊಯ್ಸಳ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಜಗತಿಯ ಆಕಾರ ನಕ್ಷತ್ರಾಕಾರದಲ್ಲಿದೆ, ಜಗತಿಯು ಅಗಲವಾಗಿರುವುದರಿಂದ ವೀಕ್ಷಕರು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಲು ಹಾಗೂ ಹೊರಗೋಡೆಗಳ ಮೇಲಿರುವ ಚಿತ್ರಪಟ್ಟಿಕೆಗಳ ಅಂದವನ್ನು ಸವಿಯಲು ಅನುಕೂಲವಾಗಿದೆ.

[1] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

ದೇವಾಲಯದ ಹೊರ ಚಿತ್ರಪಟ್ಟಿಕೆಗಳ ಸುತ್ತಲೂ ವಿವಿಧ ಪಶು, ಪಕ್ಷಿ, ಕುಸುಮ, ತೇರುಲತೆಗಳು, ಅರೆಯೆಚ್ಚಿದ ಚಿತ್ರದ ಸಮೂಹ ಸಮೃದ್ದವಾಗಿದೆ. ಸಾಹಸಮಯವಾದ ಕೀರ್ತಿಮುಖಗಳು ಸುಂದರ ಆಕರ್ಷಣೀಯವಾಗಿದೆ. ಒಂದರ ಹಿಂದೆ ಒಂದರಂತೆ ಕುಣಿಕೆ ಹಾಕಿಕೊಂಡು ಸಾಲಾಗಿ ಮೆರೆವಣಿಗೆಯಲ್ಲಿ ಸಾಗುವ ಹಾಗೆ ಕೆತ್ತಿದ ಅಜ್ಞಾನ ರೂವಾರಿಗಳ ಕಲಾಭಿಜ್ಞಾನ ಬಹಳ ಸೂಕ್ಷ್ಮವಾಗಿ ಗಮನ ಸೆಳೆಯುತ್ತದೆ. ಸಾಲು ಸಾಲು ಗಜಗಳ ಚಿತ್ರಣ ಆನಂದ ಪೂರ್ಣವಾಗಿದೆ. ಮೆಲ್ಲ ಮೆಲ್ಲನೆ ಚೊಕ್ಕ ವಾಗಿ ತಾಳಬದ್ದವಾಗಿ, ಲಯವಾಗಿ, ಸಾಗುವ ಗಾಡಿಯ ಮೋಡಿಯ ಚಿತ್ರ ಬಲು ರಮ್ಯವಾಗಿದೆ. ದಾಳಿಗೆ ಹೊರಟಿರುವ ನಾಗಲೋಟದ ಕುದುರೆಗಳ ಸಾಲಿನ ಕೆತ್ತನೆ ಪ್ರಶಂಸನೀಯವಾಗಿದೆ. ಗಾಂಭೀರ್ಯತೆಯ ರೀತಿಯಲ್ಲಿ ಸಾಗಿರುವ ಸಿಂಹಯಾಳಿಗಳ ಚಿತ್ರಣ ಮಹತ್ವಪೂರ್ಣವಾಗಿದೆ. ಸಾಲು ಸಾಲಾಗಿರುವ ಚಿತ್ರಪಟಿಕೆಗಳು ಬಂದವರ ಕಣ್ಮನ ಸೆಳೆಯುತ್ತವೆ. ಮನೋಹರವಾದ ನೃತ್ಯ, ಕಾಮ ಲಾಸ್ಯ, ಪಟ್ಟಿಕೆಗಳು ಆಧುನಿಕತೆಗೆ ಸವಾಲಾಗಿವೆ. ಕಟಾಂಜನದ ಮೇಲಿನ ಶಿಲ್ಪಗಳು ಉಲ್ಲಾಸದಾಯಕವಾಗಿವೆ. ಸೌಂದರ್ಯ, ತಾತ್ವಿಕ ತೇಜಸ್ಸು, ಶೃಂಗಾರಮಯವಾಗಿ ರಂಜಿಸುತ್ತದೆ. ಆಳರಸರ ಹೆಗ್ಗಳಿಕೆಯ ಪ್ರತೀಕವೆಂಬಂತೆ ಜಯಮುಖಗಳ ಸುಂದರ ಸಾಲು ಸಾಲುಗಳ ಚಿತ್ರಣ ಶಿಲ್ಪಕಲಾವಿನ್ಯಾಸಕ್ಕೆ ಭಂಗತಾರದೆ ಸಂಕೀರ್ಣಮಯವಾಗಿ ಮನೋಜ್ಞಾನವಾಗಿದೆ. ಒಂದಕ್ಕೊಂದು ಎರಕ ಹೊಯ್ದಂತೆ ಕಾಣುವ ಶಿಲಾಬಾಲಿಕಾ ಶಿಲ್ಪಗಳು ಚಿತ್ತಾಕರ್ಷಣೀಯವಾಗಿದೆ. ಅರೆಯುಬ್ಬಿನ ಕೊರೆತ ಕಾಣುವ ಚಿತ್ರಗಳಿಗೆ ಕೊರತೆಯಿಲ್ಲ ಕೈಯೆತ್ತಿ ಎದೆಯುಬ್ಬಿಸಿ ಸೆಡುಪು ನಿಲುವಿನಲ್ಲಿ ನಿಂತು ಬಂದವರ ದೇವಾಲಯದ ಇನ್ನೂ ಕೆಲವು ಶಿಲ್ಪಗಳ ಕೆತ್ತನೆಯು ಅಪೂರ್ಣವಾಗಿರುವುದನ್ನು ಕಾಣಬಹುದು. ಇಲ್ಲಿಯ ಕಲಾ ಕೆತ್ತನೆಯ ಮುಖಾಂತರವಾಗಿ ಅಭಿವ್ಯಕ್ತಪಡಿಸಲಾಗಿದೆ.

**ಗರ್ಭಗೃಹ:** ಗರ್ಭಗೃಹವು ದೇವಾಲಯದ ಮುಖ್ಯ ಭಾಗವಾಗಿದೆ. ಇದು ದೇವಾಲಯದ ಬಾಗಿಲಿರುವ ಪಶ್ಚಿಮಕ್ಕೆ ಗರ್ಭಗೃಹವನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿ ಪವಿತ್ರಗೊಳಿಸಿದ ಜಾಗದಲ್ಲಿ ಒಂದು ಪೀಠ ಅಂದರೆ ಒಂದು ಅಡಿ ಎತ್ತರವಿದ್ದು ಅದರ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಲಿಂಗದ ಮೇಲೆ ಬಿಟ್ಟ ನೀರು ಇತರೆ ಅಭಿಷೇಕಗಳು ಹೊರಕ್ಕೆ ಹೋಗುವಂತೆ ವ್ಯವಸ್ಥೆಮಾಡಲಾಗಿದೆ. ಲಿಂಗವನ್ನು ಬಿಟ್ಟರೆ ಯಾವ ರೀತಿಯ ದೇವರನ್ನು ಈ ಗರ್ಭಗೃಹದಲ್ಲಿ ಇರಿಸಲಾಗಿಲ್ಲ. ಈ ದೇವಾಲಯದಲ್ಲಿ ಯಾವುದೇ ಪೂಜಾ ಕಾರ್ಯ ನಡೆಯುವುದಿಲ್ಲ. ಬಾಗಿಲನ್ನು ಹೂ ಬಳ್ಳಿಗಳಿಂದ ಅಲಂಕರಿಸಲಾಗಿದೆ, ಗರ್ಭಗೃಹದ ಒಳಗಡೆ ಚೌಕಕಾರವಾಗಿದ್ದು ಭಿತ್ತಿಯಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ ಬದಲಾಗಿ ಸರಳವಾಗಿ ಸುಂದರವಾಗಿದೆ. ಹೊಯ್ಸಳ ದೇವಾಲಯಗಳಲ್ಲಿ ಗರ್ಭಗುಡಿಗಳು ವಿಶೇಷ ಅಲಂಕರಣಗಳಿಂದ ಕೂಡಿರುವಂತೆ ನಾಗಲಾಪುರ ದೇವಾಲಯದಲ್ಲಿಯೂ ಆಕರ್ಷಕವಾದ ಗರ್ಭಗುಡಿಯನ್ನು ಕಾಣಬಹುದು.

**ಸುಖನಾಸಿ:** ಗರ್ಭಗೃಹಕ್ಕೆ ತಾಗಿ ಇರುವ ಅಂತರಾಳವು ಹೆಚ್ಚು ಕಡಿಮೆ ಗರ್ಭಗೃಹದಷ್ಟೆ ವಿಸ್ತೀರ್ಣವುಳ್ಳದ್ದಾಗಿದೆ. ಇದು ಚೌಕಕಾರವಾಗಿದ್ದು ಸುಖನಾಸಿಯ ದ್ವಾರ ಬಂಧವು ಅಲಂಕಾರಯುಕ್ತವಾಗಿದ್ದು ಇದರ ಎರಡು ಬದಿಯಲ್ಲಿ ಬಹುಮುಖಗಳವುಳ್ಳ ಅರೆಂಬಗಂಬಳಿವೆ. ಮಕರ ತೋರಣ ಸಹಿತವಾದ ಲಲಾಟಬಿಂಬವನ್ನು ಇಲ್ಲಿ ಕಾಣಬಹುದು. ಲಲಾಟ ಬಿಂಬದಲ್ಲಿ ಶಿವನನ್ನು ಉಮಮಹೇಶ್ವರ ಮತ್ತು ತಾಂಡವೇಶ್ವರನನ್ನು ಕೆತ್ತಲಾಗಿದೆ. ಪೇದ್ಯದಲ್ಲಿ ದ್ವಾರಪಾಲಕರು ಇದ್ದಾರೆ. ಸೂಕ್ಷ್ಮವಾಗಿ ವೈಭವೋಪೇತವಾಗಿ ಕೆತ್ತನೆ ಮಾಡಿರುವ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಮಕರಗಳ ಮಧ್ಯೆ ನರ್ತಿಸುತ್ತಿರುವ ನಟರಾಜನನ್ನು ನೋಡಬಹುದು. ಅಂತರಾಳದ ವಿತಾನವು ಪದ್ಮವನ್ನಾವರಿಸಿರುವ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಹೊಂದಿದ್ದು ಸುಖನಾಸಿಯ ದ್ವಾರದಲ್ಲಿ ಜಾಲಂಧ್ರಗಳನ್ನು ಕಾಣಬಹುದು.

**ನವರಂಗ:** ಸುಖನಾಸಿಯ ಮುಂಭಾಗದಲ್ಲಿ ನವರಂಗ ಕಂಡು ಬರುತ್ತದೆ. ಈ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳನ್ನು ಕಾಣಬಹುದಾಗಿದೆ. ನಾಲ್ಕು ಕಂಬಗಳ ಮಧ್ಯೆ ಭುವನೇಶ್ವರಿಯನ್ನು ಒಳಗೊಂಡಿದೆ. ಈ ದೇವಾಲಯದ ವಿಶೇಷವೆಂದರೆ ದಕ್ಷಿಣಕ್ಕೆ ಪ್ರವೇಶದ್ವಾರವನ್ನು ಹೊಂದಿದೆ. ಹಾಗೆಯೇ ದಕ್ಷಿಣಕ್ಕೆ ಪ್ರವೇಶದ್ವಾರ ಇರುವುದರಿಂದ ಪೂರ್ವದಲ್ಲಿ ಒಂದು ಕಿಂಡಿಯನ್ನು ಬಿಡಲಾಗಿದೆ. ನವರಂಗದಲ್ಲಿ ಗರ್ಭಗುಡಿಯ ಎಡಭಾಗದಲ್ಲಿ ಮಹಿಷಾಸುರ ಮರ್ಧಿನಿಯ ವಿಗ್ರಹವನ್ನು ಬಲಭಾಗದಲ್ಲಿ ವಿಘ್ನೇಶ್ವರನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಉತ್ತರದ ಭಾಗದಲ್ಲಿ ಬ್ರಹ್ಮ, ವಿಷ್ಣುಗಳ ವಿಗ್ರಹಗಳನ್ನು ಕಾಣಬಹುದಾಗಿದೆ. ಹಾಗೆಯೇ ಗರ್ಭಗುಡಿಯ

ವಿರುದ್ದ ದಿಕ್ಕಿನಲ್ಲಿ ಅಂದರೆ ಪೂರ್ವದಲ್ಲಿ ನಂದೀಶನ ವಿಗ್ರಹವನ್ನು ಇಡಲಾಗಿದೆ. ಇದರ ಬಲಭಾಗದಲ್ಲಿ ಮಹೇಶ್ವರನ ವಿಗ್ರಹವನ್ನು ಕಾಣಬಹುದಾಗಿದೆ. ಹಾಗೆಯೇ ದಕ್ಷಿಣ ದಿಕ್ಕೀನಿಂದ ಪ್ರವೇಶದ್ವಾರವನ್ನು ಹೊಂದಿದ್ದು, ಪ್ರವೇಶದ್ವಾರದ ಬಲದಲ್ಲಿ ಲಕ್ಷ್ಮಿ ಶಿಲ್ಪವನ್ನು ಮತ್ತು ಎಡಭಾಗದಲ್ಲಿ ನವಮಾತೃಕೆಯರ ವಿಗ್ರಹಗಳನ್ನು ಕಾಣಬಹುದಾಗಿದೆ.

**ನವರಂಗದ ಬಿಡಿ ಭಾಗಗಳು**

**ಕೋಷ್ಠಗುಡಿಗಳು:** ಕೇದಾರೇಶ್ವರ ದೇವಾಲಯದ ನವರಂಗದ ಎಡ ಮತ್ತು ಬಲಭಾಗದಲ್ಲಿ ಗುಡಿ ಕೋಷ್ಠಗಳನ್ನು ಕಾಣಬಹುದು ಅಂತರಾಳದ ಎಡ ಮತ್ತು ಬಲಗೋಡೆಗೆ ಸೇರಿದಂತೆ ಕೋಷ್ಠಗುಡಿಗಳನ್ನು ಕಟ್ಟಲಾಗಿದೆ. ನವರಂಗದ ಬಲಗಡೆಯ ಕೋಷ್ಠಗುಡಿಯ ಒಳಗಡೆ ಗಣಪತಿ ಶಿಲ್ಪವನ್ನು ಇತ್ತೀಚೆಗೆ ತಂದು ಕೂರಿಸಲಾಗಿದೆ. ಎಡ ಕೋಷ್ಠಗುಡಿಯ ಒಳಗಡೆ ಈಗ ಯಾವುದೇ ಶಿಲ್ಪ ಕಂಡು ಬರುವುದಿಲ್ಲ. ಇದರ ಗೋಡೆಯಲ್ಲಿ ಅರೆಗಂಬಗಳನ್ನು, ಶಿಖರ ವೇಸರ ಮಾದರಿಯಲ್ಲಿರುವುದನ್ನು ನೋಡಬಹುದು. ಕೋಷ್ಠಗುಡಿಯ ದ್ವಾರದ ಬುಡದಲ್ಲಿ ದ್ವಾರಪಾಲಕ ಶಿಲ್ಪಗಳನ್ನು ಕೆತ್ತಲಾಗಿದೆ. ಕೋಷ್ಠಗುಡಿಯ ಪಕ್ಕದಲ್ಲಿ ನವಮಾತೃಕೆಯರ ಶಿಲ್ಪಗಳನ್ನು ಕಾಣಬಹುದು.

**ನವರಂಗದಲ್ಲಿ ಕಂಡು ಬರುವ ಶಿಲ್ಪಗಳು**

**ಸೂರ್ಯಶಿಲ್ಪ:** ಕೇದಾರೇಶ್ವರ ದೇವಾಲಯದ ನವರಂಗದಲ್ಲಿ ಸೂರ್ಯ ಶಿಲ್ಪವನ್ನು ನೋಡಬಹುದು. ಇದು ೨ ರಿಂದ ೨ ೧/೨ ಅಡಿ ಉದ್ದವಿದ್ದು ಇದರ ಕೈಯಲ್ಲಿ ಪದ್ಮ, ಅಭಯ ಮತ್ತು ದಾನ, ಛಾಯ ಇವುಗಳನ್ನು ಹಿಡಿದಿರುವಂತೆ ವಿಶೇಷವಾಗಿ ಕೆತ್ತಲಾಗಿದೆ.

**ನಂದಿ:** ನವರಂಗದ ಗರ್ಭಗುಡಿಯ ಬಾಗಿಲ ಎದುರಿಗೆ ನಂದಿ ಶಿಲ್ಪವನ್ನು ಸ್ಥಾಪಿಸಲಾಗಿದೆ. ಈ ನಂದಿ ಶಿಲ್ಪವನ್ನು ಒಂದ ಪೀಠದ ಮೇಲೆ ಕೆತ್ತನೆ ಮಾಡಿದ್ದು ಇದು ಹೊಯ್ಸಳ ಶಿಲ್ಪಿಯ ಕೆತ್ತನೆಯ ಕೆಲಸವನ್ನು, ಮೆರುಗನ್ನು ತೋರಿಸುತ್ತದೆ.

**ವಿಷ್ಣು:** ಕೇದಾರೇಶ್ವರ ದೇವಾಲಯದ ನವರಂಗದಲ್ಲಿ ವಿಷ್ಣು ಶಿಲ್ಪವನ್ನು ಕಾಣಬಹುದು ಈ ಶಿಲ್ಪವನ್ನು ಒಂದು ಪೀಠದ ಮೇಲೆ ನಿಂತಿರುವಂತೆ ಕೆತ್ತಲಾಗಿದೆ. ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು ಎರಡು ಕೈಯಲ್ಲಿ ಶಂಖ ಗಧಾವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಪೀಠದ ಭಾಗವನ್ನು ಹೂಬಳ್ಳಿಗಳಿಂದ ಅಲಂಕರಿಸಲಾಗಿದೆ.

**ಬ್ರಹ್ಮ:** ಕೇದಾರೇಶ್ವರ ದೇವಾಲಯದ ನವರಂಗದಲ್ಲಿ ಬ್ರಹ್ಮನ ಶಿಲ್ಪವನ್ನು ತಂದು ಕೂರಿಸಲಾಗಿದೆ. ಈ ಶಿಲ್ಪವು ಒಂದು ಪೀಠದ ಮೇಲೆ ಇರುವುದನ್ನು ನೋಡಬಹುದು ಹಾಗೂ ಅಪೂರ್ಣ ಕೆತ್ತನೆಯಿಂದ ಕೂಡಿದೆ.

**ಸರಸ್ವತಿ:** ಕೇದಾರೇಶ್ವರ ದೇವಾಲಯದಲ್ಲಿರುವ ಸರಸ್ವತಿ ಶಿಲ್ಪವು ಕುಳಿತಿರುವ ಭಂಗಿಯಲ್ಲಿದೆ ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು ಅಕ್ಷಮಾಲ, ಪಾಷ, ಪುಸ್ತಕ ಮತ್ತು ಅಂಕುಶವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಇದರ ಕೀರ್ತಿಮುಖದ ಭಾಗವು ವಿಘ್ನವಾಗಿರುವುದನ್ನು ನೋಡಬಹುದು.

**ಕಂಬಗಳು:** ಕೇದಾರೇಶ್ವರ ದೇವಾಲಯದ ಕಂಬಗಳು ಚೌಕಕಾರದ ಬುಡದ ಮೇಲೆ ಉರುಳೆಯಾಕಾರದ ದಿಂಡನ್ನು ಹೊಂದಿರುತ್ತದೆ. ಈ ಉರುಳೆ ದಿಂಡಿನ ಮಧ್ಯೆಭಾಗದಲ್ಲಿ ಪ್ರಧಾನವಾಗಿ ಕಾಣುವಂತೆ ಗಂಟೆಯಾಕೃತಿಯ ಭಾಗವಿರುತ್ತದೆ. ಗಂಟೆಯಾಕಾರದ ಮೇಲೆ ಮತ್ತು ಕೆಳಗಿನ ಭಾಗಗಳಲ್ಲಿ ಸೂಕ್ಷ್ಮವಾಗಿ, ಒತ್ತೊತ್ತಾಗಿ ಕೊರೆದ ನಿಮ್ನ ಪೀನ, ಸುರುಳಿ, ಉರುಳೆ, ಪಟ್ಟೆ ಆಕಾರದ ವಿವಿಧ ಕೆತ್ತನೆಗಳು ಸಮಾನಾಂತರವಾಗಿ ಕಾಣಬರುತ್ತದೆ. ಈ ದಿಂಡಿನ ಮೇಲೆ ದಿಂಬಿನಾಕಾರದ ಮೊನಚಾದ ಮುಖವುಳ್ಳ ಭೋಧಿಗೆ ಇರುತ್ತದೆ. ಇದರ ಮೇಲೆ ದ್ರಾವಿಡ ರೀತಿಯ ಫಲಕ ಕೂಡಿಸಿರುತ್ತಾರೆ. ಕೇದಾರೇಶ್ವರ ದೇವಾಲಯದ ಕಂಬದ ಮೇಲಿನ ಚಾಚು ಪೀಠಗಳು ಸುರುಳಿಯಾಕಾರದ ತುದಿಯುಳ್ಳದ್ದಾಗಿದ್ದು ವ್ಯಾಘ್ರಮುಖದೊಂದಿಗೆ ಕೂಡಿದೆ.

**ಭುವನೇಶ್ವರ:** ಕೇದಾರೇಶ್ವರ ದೇವಾಲಯದ ನವರಂಗದ ಮಧ್ಯೆದಲ್ಲಿ ೪ ಕಂಬಗಳ ಮೇಲೆ ಭುವನೇಶ್ವರಿಯು ಗೋಳಾಕಾರವಿದೆ. ೨ ಅಡಿಗಳಷ್ಟು ಆಳವಾಗಿದೆ ಇದರಲ್ಲಿ ಮೂರು ಹಂತಗಳಿವೆ. ಪ್ರತಿಯೊಂದು ಹಂತದಲ್ಲಿಯೂ ೩೩ ಮೊಗ್ಗುಗಳಿವೆ. ಭುವನೇಶ್ವರಿಯ ೪ ಕಡೆಗಳಲ್ಲಿಯೂ ಕೀರ್ತಿಮುಖಗಳಿವೆ. ಮಧ್ಯದಲ್ಲಿ ಕಮಲವು ಮೋತೆಕೃತಿಯಲ್ಲಿ ಇಳಿಬಿಟ್ಟಿದೆ. ಕೇದಾರೇಶ್ವರ ದೇವಾಲಯದ ನವರಂಗದಲ್ಲಿ ೯ ಭುವನೇಶ್ವರಿಗಳು ಕಾಣಬರುತ್ತವೆ.

**ಜಗತಿ:** ಕೇದಾರೇಶ್ವರ ದೇವಾಲಯದ ಜಗತಿಯ ಎತ್ತರ ಸಾಮಾನ್ಯವಾಗಿ ಸುಮಾರು ೧–೨ ಮೀ ವರೆಗೂ ಇದೆ. ಜಗತಿಯ ಮೇಲೇರಲು ದ್ವಾರಭಾಗದ ನೇರಕ್ಕೆ ಸೋಪಾನಗಳಿವೆ. ಇದರ ಜಗತಿಯ ಹೊರ ವಲಯ ದೇವಾಲಯದ ಹೊರವಲಯಕ್ಕೆ ಸಮಾನಾಂತರವಾಗಿದೆ. ಆದರೆ ದೇವಾಲಯದ ವಿಸ್ತೀರ್ಣಕ್ಕಿಂತ ಜಗತಿಯ

ವಿಸ್ತೀರ್ಣ ಜಾಸ್ತಿ ಇರುವುದರಿಂದ ದೇಗುಲದ ಸುತ್ತಲೂ ಅಗಲವಾದ ಪಥವನ್ನು ನೀಡಿದ್ದಾರೆ ಕೇದಾರೇಶ್ವರ ದೇವಾಲಯದ ಜಗತಿಯ ಹೊರ ಮುಖವನ್ನು ಕಲ್ಲಿನಿಂದ ಕಟ್ಟಿದ್ದು ಜಗತಿಯ ಮೇಲ್ಮುಖ ಕಲ್ಲು ಹಾಸಿನಿಂದ ಮುಚ್ಚಿರುತ್ತದೆ, ಜಗತಿ ನಕ್ಷತ್ರಾಕಾರದಲ್ಲಿಲ್ಲ ಅಥವಾ ಕೆಲವು ದೇವಾಲಯಗಳಲ್ಲಿ ಕಂಡು ಬರುವಂತೆ ಜಗತಿಯನ್ನು ದ್ರಾವಿಡ ಮಾದರಿಯ ದಿಂಡುಗಳಿಂದ ನಿರ್ಮಿಸಿರುವುದಿಲ್ಲ.

**ಅಧಿಷ್ಠಾನ:** ಹೊಯ್ಸಳ ದೇವಾಲಯಗಳಲ್ಲಿ ಸಾಮಾನ್ಯವಾಗಿ ೯ ಪಟ್ಟಿಕೆಗಳಿರುತ್ತವೆ. ಕೆಳಗಿನ ಪಟ್ಟಿಕೆಯಲ್ಲಿ ಆನೆಯ ಸಾಲಿನ ಶಿಲ್ಪದ ಕೆತ್ತನೆ ಕಾಣಬರುತ್ತದೆ. ಈ ಹಿನ್ನಲೆಯಲ್ಲಿ ಕೇದಾರೇಶ್ವರ ದೇವಾಲಯದಲ್ಲಿ ೬ ಪಟ್ಟಿಕೆಗಳನ್ನು ಕಾಣಬಹುದು.

೧. ಮೊದಲನೇ ಪಟ್ಟಿಕೆಯಲ್ಲಿ ಆನೆಯ ಸಾಲು
೨. ಎರಡನೆ ಪಟ್ಟಿಕೆಯಲ್ಲಿ ಕುದುರೆಯ ಸಾಲು,
೩. ಮೂರನೇ ಪಟ್ಟಿಕೆಯಲ್ಲಿ ಹೂಬಳ್ಳಿಗಳಿಂದ ಮಾಡಿದ ಲತಾಪಟ್ಟಿಕೆ,
೪. ಕೇದಾರೇಶ್ವರ ದೇವಾಲಯದ ನಾಲ್ಕನೇ ಪಟ್ಟಿಕೆಯನ್ನು ಖಾಲಿ ಬಿಡಲಾಗಿದೆ.
೫. ಐದನೇ ಪಟ್ಟಿಕೆಯಲ್ಲಿ ಯಾಳಿ ಎಂಬ ಪ್ರಾಣಿಯ ಸಾಲನ್ನು ಕೆತ್ತಲಾಗಿದೆ.
೬. ಹಂಸಗಳ ಸಮೂಹ.

ಕೇದಾರೇಶ್ವರ ದೇವಾಲಯದಲ್ಲಿ ನಾಲ್ಕನೇ ಪಟ್ಟಿಕೆಯನ್ನು ಖಾಲಿ ಇರುವುದನ್ನು ಕಾಣಬಹುದು. ಇದರ ನಾಲ್ಕನೇ ಪಟ್ಟಿಕೆಯನ್ನು ಹಣದ ಸಮಸ್ಯೆಯಿಂದ ಅಥವಾ ಇನ್ನೂ ಬೇರೆ ಸಮಸ್ಯೆಯಿಂದ ಖಾಲಿ ಬಿಟ್ಟಿರಬಹುದು. ಈ ಪಟ್ಟಿಕೆಯನ್ನು ಕೆತ್ತುವ ಶಿಲ್ಪಿಯು ಜ್ವರದ ಸಮಸ್ಯೆಯಿಂದ ಅಥವಾ ಮತ್ತೊಂದು ಸಮಸ್ಯೆಯಿಂದ ಬಾರದೆ ಇರಬಹುದು.

**ಭಿತ್ತಿ:** ಕೇದಾರೇಶ್ವರ ದೇವಾಲಯದ ಭಿತ್ತಿಯ ಸಾಲಂಕೃತ ಭಿತ್ತಿಯ ವರ್ಗಕ್ಕೆ ಸೇರುತ್ತದೆ ಇದರ ಭಿತ್ತಿಯನ್ನು ಸಾಮಾನ್ಯವಾಗಿ ಕಪೋತವನ್ನು ನಿರ್ಮಿಸುವುದರ ಮೂಲಕ ಭಿತ್ತಿಯನ್ನು ಎರಡು ಸಮಾನಾಂತರ ಭಾಗಗಳಾಗಿ ವಿಂಗಡಿಸಿದ್ದಾರೆ.ಕೆಳಭಾಗದಲ್ಲಿ ಒತ್ತೊತ್ತಾಗಿ ಸಾಲುಶಿಲ್ಪಗಳನ್ನು ಕಂಡರಿಸಿ ಕಪೋತದ ಮೇಲ್ಭಾಗದಲ್ಲಿ ವಾಸ್ತು ವಿನ್ಯಾಸಗಳನ್ನು ಕೆತ್ತಿದ್ದಾರೆ. ಕೆಳಭಿತ್ತಿಯಲ್ಲಿ ಹೆಚ್ಚು ರಮಣೀಯ ಮತ್ತು ಆಕರ್ಷಕ ಶಿಲ್ಪಗಳನ್ನು ಕೆತ್ತಿದ್ದಾರೆ. ಈ ಶಿಲ್ಪಗಳು ಸ್ಥಾನಕ,ಆಸೀನ, ಅಪರೂಪವಾಗಿ ಶಯನಮೂರ್ತಿಗಳಿರುತ್ತವೆ ಆದರೆ ಸ್ಥಾನಕ ಮೂರ್ತಿಗಳೇ ಹೆಚ್ಚು. ಅಕ್ಕ ಪಕ್ಕಗಳಲ್ಲಿ ಹಿಂಬಣಿ– ಮುಂಬಣಿಗಳಿಗನುಗುಣವಾಗಿ ಅನುಚರರು, ಸಹಚರರು, ಆಯುಧ ಪುರುಷರು, ಪರಿವಾರ ದೇವತೆಗಳು ಇತ್ಯಾದಿಗಳ ಸೂಕ್ತ ಶಿಲ್ಪಗಳನ್ನು ನಿಗದಿತ ಸಣ್ಣ ಪ್ರಮಾಣದಲ್ಲಿ ಕಡೆದಿರುತ್ತಾರೆ. ಕೆಲವೆಡೆ ಈ ಶಿಲ್ಪಗಳನ್ನು ಸೂಕ್ಷ್ಮ ಪ್ರಮಾಣದಲ್ಲಿ ಕಾಲಿನ ಬಳಿಯೂ ಕಾಣಬಹುದು. ಹಿಂಬಣಿ–ಮುಂಬಣಿಗಳಿಗನುಗುಣವಾಗಿ ವಿವಿಧ ದಿಕ್ಕುಗಳತ್ತ ಮುಖ ಮಾಡಿರುವ ಈ ಶಿಲ್ಪಗಳ ಮುಖಭಾವಗಳು ನೆರಳು ಬೆಳಕಿನ ಹೊನಲಾಟದಿಂದಾಗಿ ವಿವಿಧ ಭಾವನೆಗಳನ್ನು ದಿನದ ವಿವಿಧ ಕಾಲಗಳಲ್ಲಿ ಹೊರ ಹೊಮ್ಮುತ್ತವೆಂದು ಕಲಾವಿಮರ್ಶಕರ ಅಭಿಪ್ರಾಯ.

ಕೇದಾರೇಶ್ವರ ದೇವಾಲಯದ ಭಿತ್ತಿಯ ಮಧ್ಯೆಭಾಗದಲ್ಲಿ ತೆಳುವಾದ ಉದ್ದವಾದ ಆಂಗ್ಲ ಅಕ್ಷರ ಎಸ್ ಆಕಾರದಲ್ಲಿ ಎರಡು ಬಾಗುಳ್ಳ ಕಪೋತವನ್ನು ಕೂಡಿಸಿದ್ದಾರೆ. ಸಾಲಂಕೃತವಾದ ಈ ಕಪೋತ ಭಿತ್ತಿಯನ್ನು ಎರಡು ಭಾಗಗಳನ್ನಾಗಿ ಕಾಣಿಸುವುದರ ಜೊತೆಗೆ ಭಿತ್ತಿಯ ಏಕಾತನೆತೆಯ ನೋಟವನ್ನು ಹೋಗಲಾಡಿಸುತ್ತದೆ. ಕಪೋತದ ಮೇಲ್ಗಡೆ ಸಾಲಾಗಿ ಭಿತ್ತಿಪಾದಗಳು ಮತ್ತು ಅಲಂಕಾರಿಕ ಶಿಖರಗಳು ಕಂಡು ಬರುತ್ತವೆ. ಇವುಗಳ ಕೆಳಗಿನ ಶಿಲ್ಪಗಳ ನೇರದಲ್ಲಿ, ಮೇಲ್ಭಾಗದಲ್ಲಿ ಸಾಂಕೇತಿಕವಾಗಿ ಇದ್ದು ದ್ರಾವಿಡ ಮಾದರಿ ಭಿತ್ತಿ ಕೋಷ್ಠ ಮತ್ತು ಎರಡು ಅರೆಗಂಬಗಳ ಮಧ್ಯೆ ಒಂದು ಭಿತ್ತಿಕೋಷ್ಠ ಒಂದೇ ಕಂಬದಲ್ಲಿ ಒಂದು ಭಿತ್ತಿಕೋಷ್ಠವನ್ನು ಕಂಡಿರಿಸಿದ್ದಾರೆ. ಕೇದಾರೇಶ್ವರ ದೇವಾಲಯದ ನವರಂಗದ ಗೋಡೆಯ ಭಿತ್ತಿಯಲ್ಲಿ ಶಿವ, ಗಣಪತಿ, ದಕ್ಷಿಣಮೂರ್ತಿ ಶಿಲ್ಪಗಳಿದ್ದು, ಇನ್ನೂ ಕೆಲವು ಶಿಲ್ಪಗಳು ದ್ವಿಭಂಗಿಯಲ್ಲಿದ್ದು ಅಪೂರ್ಣವಾಗಿರುವುದನ್ನು ನೋಡಬಹುದು.

**ತಳವಿನ್ಯಾಸ:** ಕೇದಾರೇಶ್ವರ ದೇವಾಲಯವು ಏಕಕೂಟ ದೇವಾಲಯದ ವರ್ಗಕ್ಕೆ ಸೇರಿದೆ. ಗರ್ಭಗೃಹದ ತಳನಕ್ಷೆಯ ಹೊರವಲಯ ಸಾಮಾನ್ಯವಾಗಿ ವಿಪರೀತವಾದ ಹಿಂದೆ–ಮುಂದೆ ಸರಿತಗಳಿಂದ ಕೂಡಿದೆ. ದ್ರಾವಿಡ ಮಾದರಿಗಳಂತೆ ಭದ್ರ, ಪ್ರತಿಭದ್ರ, ಕರ್ಣ ಮುಂತಾದವುಗಳ ಉಪಯೋಗವು ಸಾಕಷ್ಟು ಕಂಡುಬರುತ್ತದೆ. ವೇಸರ ಮಾದರಿಯ ದೇವಾಲಯಗಳಲ್ಲಿ ಮಾತ್ರ ನಕ್ಷತ್ರಾಕಾರದ ತಳಕಟ್ಟನ್ನು ಕಾಣಬಹುದು. ಕೇದಾರೇಶ್ವರ ದೇವಾಲಯದಲ್ಲಿ ನಕ್ಷತ್ರಾಕಾರದ ತಳ ವಿನ್ಯಾಸ ಕೇವಲ ಗರ್ಭಗುಡಿಯ ಭಾಗಕ್ಕೆ ಮಾತ್ರ ಸೀಮಿತವಾಗದೆ. ಇದರ ಗರ್ಭಗೃಹವು ಚೌಕಕಾರವಾಗಿರುವುದನ್ನು ಕಾಣಬಹುದು, ನವರಂಗಕ್ಕೆ ಮುಂಬಾಗದಲ್ಲಿ ಪಾರ್ಶ್ವಗಳಲ್ಲಿ ದ್ವಾರಗಳಿರುತ್ತವೆ. ಕೇದಾರೇಶ್ವರ ದೇವಾಲಯದ ಜಾಲಂಧ್ರಗಳು ಕಾಣುವುದಿಲ್ಲ ಇದರ ನವರಂಗವು ಕತ್ತಲು–ಮಸುಕಾಗಿದ್ದು, ಪ್ರಸ್ತುತದಲ್ಲಿ ವಿದ್ಯುತ್ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಹಜಾರದ ಒಳಭಾಗ ವಿವಿಧಾಲಂಕಾರದ, ವಿನ್ಯಾಸದ ಭುವನೇಶ್ವರಿಗಳಿಂದ, ಕಂಬಗಳಿಂದ ಸಣ್ಣ ಸಣ್ಣ ಗುಡಿಕೋಷ್ಠಗಳಿಂದ ಕೂಡಿದೆ. ನವರಂಗದ ಮಧ್ಯೆದ ಅಂಕಣದಲ್ಲಿ ನೆಲಮಟ್ಟದಿಂದ ಸ್ವಲ್ಪ ಏರಿದಂತೆ ರಂಗಸ್ಥಳವೂ ಇದೆ.

ಕೇದಾರೇಶ್ವರ ದೇವಾಲಯದ ತಳವಿನ್ಯಾಸದ ಹೊರ ಆಕೃತಿಗೆ ಬರುವುದಾದರೆ ಭದ್ರತೆ ಮತ್ತು ಸೌಂದರ್ಯಗಳ ದೃಷ್ಠಿಯಿಂದ ಗೋಡೆಯ ಹೊರವಲಯದ ರಚನೆಯನ್ನು ರೂಪಿಸಲಾಗಿದೆ. ಗೋಡೆಯ ಹೊರ ಮುಖದಲ್ಲಿ ವಿಪರೀತವಾದ ಹಿಂದೆ ಮುಂದೆ ಸರಿತಗಳಿವೆ. ಇದರಿಂದ ನೇರಗೋಡೆಯ ಏಕಾತನೆಯನ್ನು ಹೋಗಲಾಡಿಸುವುದು. ಈ ಗೋಡೆಗೆ ಹೆಚ್ಚಿನ ದೃಢತೆಯನ್ನು ಕೊಡುವುದು ಶಿಲ್ಪ ಕೆತ್ತನೆಗೆ ಹೆಚ್ಚಿನ ಸ್ಥಳವಕಾಶ ಮಾಡಿಕೊಡುವುದು ಮತ್ತು ಕೊನೆಯದಾಗಿ ಭಿತ್ತಿಯ ಶಿಲ್ಪಗಳಿಗೆ ನೆರಳು–ಬೆಳಕಿನ ಹೊನಲಾಟದ ಮೂಲಕ ಹೆಚ್ಚಿನ ಆಕರ್ಷಣೆಯನ್ನು ಒದಗಿಸುವುದೇ ಆಗಿತ್ತು. ಮೇಲೆ ಹೇಳಿದ ಲಕ್ಷಣಗಳೆಲ್ಲವು ಹೆಚ್ಚು ಕಡಿಮೆ ಎಲ್ಲ ಹೊಯ್ಸಳ ಶೈಲಿಯ ಗುಡಿಗಳಲ್ಲಿಯೂ ಕಾಣಬಹುದಾಗಿದೆ, ನಕ್ಷತ್ರಾಕಾರದ ತಳವಿನ್ಯಾಸದಲ್ಲಿ ಅನೇಕ ಉಪ ಪ್ರಭೇಧಗಳನ್ನು ರಚಿಸಿ ಹೊಯ್ಸಳ ಶಿಲ್ಪಿಗಳು ತಮ್ಮ ಚಾಣಾಕ್ಷತನವನ್ನು ಮೆರೆದಿದ್ದಾರೆ. ಕೇದಾರೇಶ್ವರ ದೇವಾಯದ ವಿಶೇಷವೆಂದರೆ ದ್ವಾರವನ್ನು ದಕ್ಷಿಣಕ್ಕೆ ಬಿಟ್ಟಿರುವುದು ಇದೊಂದು ಹೊಯ್ಸಳರ ಪ್ರಯೋಗವೆಂದು ಹೇಳಬಹುದು, ದಕ್ಷಿಣಕ್ಕೆ ದ್ವಾರವನ್ನು ಬಿಟ್ಟಿರುವುದರಿಂದ ಕೇದಾರೇಶ್ವರ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ದೇವಾಲಯದ ನವರಂಗದಲ್ಲಿ ಗರ್ಭಗುಡಿ ಕಾಣುವಂತೆ ಪೂರ್ವ ಕಿಂಡಿಯನ್ನು ಬಿಡಲಾಗಿದೆ (ಎಂ.ಎಸ್.ಕೃಷ್ಣಮೂರ್ತಿ ೨೦೦೯)

**ಕಪೋತ:** ಕೇದಾರೇಶ್ವರ ದೇವಾಲಯದ ಭಿತ್ತಿಯ ಮೇಲ್ತುದಿಯಲ್ಲಿ ನಿರ್ಮಿಸಿರುವ ಕಪೋತವನ್ನು ನಾಜೂಕಾಗಿಯೂ ನವಿರಾಗಿಯೂ ರೂಪಿಸಿದ್ದಾರೆ. ಹೊಯ್ಸಳ ದೇವಾಲಯದ ಕಪೋತಗಳು ದ್ರಾವಿಡ ಕಪೋತಗಳಿಗಿಂತ ವಿಭಿನ್ನ ಇವು ತೆಳುವಾಗಿಯೂ ಹೆಚ್ಚು ಅಗಲವಾಗಿಯೂ ಎರಡು ಬಾಗುಗಳಿಂದ ಕೂಡಿದ್ದಾಗಿಯೂ ಇವೆ. ಕೇದಾರೇಶ್ವರ ದೇವಾಲಯದ ಕಪೋತದ ಕೆಳಮುಖ ಆಳವಾಗಿದ್ದು, ಸಾಮಾನ್ಯವಾಗಿ ಹೆಂಚಿನ ಚಾವಣಿಯ ಸೂರಿನ ಕೆಳಬಾಗದ ವಿನ್ಯಾಸವನ್ನು ಹೊಂದಿರುತ್ತದೆ.  ಕೂಡುವ ಸ್ಥಳದಲ್ಲಿ ಗುಬ್ಬಿ ಗಂಟುಗಳು, ಗುಬುಟುಗಳು ಮುಂತಾದ ಅಲಂಕರಣೆಯನ್ನು ಹೊಂದಿರುತ್ತದೆ. ಕಪೋತದ ಮೇಲ್ಭಾಗ ಎರಡು ಬಾಗಿನ ಇಳಿಜಾರು ಕಪೋತದ ಮುಂದಿನ ಹಂಚಿಗೆ ಕಸೂತಿಯನ್ನು ಹೋಲುವ ಮುಕ್ತಾಗ್ರಾಸಗಳ ಅಲಂಕರಣವೂ ಉಂಟು.

**ದ್ವಾರ ಬಂಧಗಳು:** ದೇವಾಲಯ ಯಾವುದೇ ಶೈಲಿಯ ವಾಸ್ತುವಾಗಿರಲಿ, ಹೊಯ್ಸಳ ದೇವಾಲಯಗಳ ದ್ವಾರ ಬಂಧಗಳು ಅತಿ ಆಕರ್ಷಕ ಭಾಗಗಳು. ಸಾಮಾನ್ಯವಾಗಿ ಕೇದಾರೇಶ್ವರ ದೇವಾಲಯದಲ್ಲಿ ಭಿತ್ತಿಪಾದ, ತೊಲೆ, ಕಪೋತ, ಮುಂತಾದವುಗಳು ದ್ವಾರಬಂಧದ ಸಾಮಾನ್ಯ ಕೆತ್ತನೆಗಳು ಜೊತೆಗೆ ದ್ವಾರದ ನಿಲುವು ಪಟ್ಟಿ ಮತ್ತು ತೊಲೆಗಳ ಮೇಲೆ ವಿವಿಧಾಲಂಕಾರ ಪಟ್ಟಿಗಳ ಮತ್ತು ಮಕರ ತೋರಣ ಇರುವುದನ್ನು ಕಾಣಬಹುದು. ಬುಡದಲ್ಲಿ ದ್ವಾರಪಾಲಕ ಶಿಲ್ಪಗಳೂ, ಚಾಮರಧಾರಿಗಳು, ಕಂಡರಿಸಿದ್ದಾರೆ.  ದ್ವಾರಬಂಧದ ಮತ್ತೊಂದು ವಿಶೇಷವೆಂದರೆ ಸವಿಸ್ತಾರವಾಗಿ ಕೆತ್ತನೆ ಮಾಡಿದ ಮಕರ ತೋರಣಗಳೂ ವಿಸ್ತಾರವಾಗಿ ಸೂಕ್ಷ್ಮವಾಗಿ, ವೈಭವೋಪೇತವಾಗಿ ಕೆತ್ತನೆ ಮಾಡಿದ ಮುಖಾಮುಖಿ ಮಕರಗಳು ಇವುಗಳ ಮಧ್ಯೆ ನರ್ತಿಸುತ್ತಿರುವ ವಿಷ್ಣುಶಿಲ್ಪ ಕೆಲವೊಮ್ಮೆ ಶಿಲ್ಪಗಳೊಡಗೂಡಿದ ಜಾಲಂಧ್ರ ರೀತಿಯಲ್ಲಿ ಭಾಗವನ್ನು ಅಲಂಕರಿಸಿದ್ದಾರೆ. ಮಕರತೋರಣದ ಉತ್ಕೃಷ್ಟ ಮಾದರಿಗಳನ್ನು ಕಾಣಬಹುದು.

ಹೊಯ್ಸಳ ಶಿಲ್ಪಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು ದುಂಡು ಶಿಲ್ಪಗಳು ಮತ್ತು ಉಬ್ಬು ಶಿಲ್ಪಗಳು ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುತ್ತಿದ್ದ ಪೂಜಾ ಶಿಲ್ಪಗಳು ಮದನಿಕಾ ಶಿಲ್ಪಗಳು ಕೆಲವು ದ್ವಾರಪಾಲಕ ಶಿಲ್ಪಗಳು, ನಂದಿ ಶಿಲ್ಪಗಳು, ಸಳನ ಶಿಲ್ಪಗಳು ಹಾಗೂ ಇನ್ನಿತರ ಕೆಲವು ವಿಶೇಷ ಕಲ್ಪನೆಗಳು ಮತ್ತು ಪ್ರಾಣಿ ಶಿಲ್ಪಗಳು ಪೂಜಾ ಶಿಲ್ಪಗಳ ಕಂಡರಣೆಯಲ್ಲಿ ಶಿಲ್ಪಿ ಮುಖ್ಯವಾಗಿ ಪ್ರತಿಮಾ ಶಾಸ್ತ್ರದ ನಿಬಂಧನೆಗೆ ಅನುಗುಣವಾಗಿ ಕೆತ್ತನೆ ಮಾಡಿದ್ದಾನೆ. (ಎಂ.ಎಸ್.ಕೃಷ್ಣಮೂರ್ತಿ ೨೦೦೯).

**ಕೇದಾರೇಶ್ವರ ದೇವಾಲಯದ ಭಿತ್ತಿಯಲ್ಲಿ ಕಂಡುಬರುವ ಪ್ರಮುಖ ಶಿಲ್ಪಗಳು**

ಕೇದಾರೇಶ್ವರ ದೇವಾಲಯದ ಶಿಲ್ಪಗಳು ದುಂಡು ಶಿಲ್ಪಗಳು ಮತ್ತು ಉಬ್ಬು ಶಿಲ್ಪಗಳು ಎರಡು ವರ್ಗಕ್ಕು ಸೇರಿದ ಶಿಲ್ಪಗಳು ಇರುವುದು ಗಮನಾರ್ಹ. ಈ ದೇವಾಲಯದ ಶಿಲ್ಪಗಳು ಹೆಚ್ಚು ಆಕರ್ಷಕವಾಗಿದ್ದು, ಇನ್ನೂ ಕೆಲವು ಶಿಲ್ಪಗಳನ್ನು ಪೂರ್ಣಗೊಳಿಸದೆ ಬಿಟ್ಟಿರುವುದನ್ನು ಕಾಣಬಹುದು.

ಕೇದಾರೇಶ್ವರ ದೇವಾಲಯದ ಭಿತ್ತಿಯ ಸುತ್ತಲು ಸ್ಥಾಣಕ ಮೂರ್ತಿಗಳು ಹೆಚ್ಚು, ಆಸೀನ ಮೂರ್ತಿಗಳು ಸ್ವಲ್ಪ ಕಡಿಮೆ ಸಂಖ್ಯೆಯಲ್ಲಿ ಇವೆ. ಶಿಲ್ಪಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು, ಪೀಠ, ಶಿಲ್ಪದ ಭಾಗ, ಮತ್ತು ಕೀರ್ತಿಮುಖ ಎಂದು ಮಾಡಿಕೊಳ್ಳಬಹುದು. ಕೇದಾರೇಶ್ವರ ದೇವಾಲಯದ ಶಿಲ್ಪಗಳು ಉತ್ತಮ ಗುಣಮಟ್ಟದ್ದಾಗಿದ್ದು ಇದು ಮಧ್ಯಮ ಹೊಯ್ಸಳರ ಕಾಲದ ಶೈಲಿಯಾಗಿದೆ, ಈ ಶಿಲ್ಪಗಳು ನಮಗೆ ನುಗ್ಗೇಹಳ್ಳಿಯಲ್ಲಿರುವ ಲಕ್ಷ್ಮಿ ನರಸಿಂಹ ದೇವಾಲಯವನ್ನು ನೆನಪಿಸುವಂತೆ ಕೆತ್ತಲಾಗಿದೆ.

**ಶಿವ:** ಕೇದಾರೇಶ್ವರ ದೇವಾಲಯದ ಭಿತ್ತಿಯಲ್ಲಿ ಶಿವನ ಶಿಲ್ಪವನ್ನು ನೋಡಬಹುದು ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಪರಶು, ಮೃಗ, ಅಭಯಹಸ್ತ, ಈ ಆಯುಧಗಳನ್ನು ಹಿಡಿದು ನಿಂತಿರುವಂತೆ ಕೆತ್ತಲಾಗಿದೆ. ಈ ಶಿಲ್ಪವು ಪೀಠದ ಮೇಲೆ ದ್ವಿಭಂಗಿಯಲ್ಲಿ ಇರುವುದನ್ನು ನೋಡಬಹುದು.

**ನಾಟ್ಯ ಶಿವ:** ಈ ದೇವಾಲಯದ ಗೋಡೆಯಲ್ಲಿ ನಾಟ್ಯ ಶಿವನ ಶಿಲ್ಪವನ್ನು ಕಾಣಬಹುದು ಶಿವನು ೬ ಕೈಗಳನ್ನು ಹೊಂದಿದ್ದು ಪರಶು, ಹಾಗೂ ಅಕ್ಷಮಾಲೆ, ಹಿಡಿದಿರುವಂತೆ ಕೆತ್ತಲಾಗಿದೆ. ಪೀಠದ ಭಾಗವನ್ನು ಹೂ ಬಳ್ಳಿಗಳಿಂದ ಕೆತ್ತಲಾಗಿದ್ದು ಈ ಶಿಲ್ಪವು ವಿಘ್ನವಾಗಿರುವುದನ್ನು ಕಾಣಬಹುದು.

**ಪೀಠದ ಮೇಲೆ ಕುಳಿತಿರುವ ಶಿವ:** ಕೇದಾರೇಶ್ವರ ದೇವಾಲಯದಲ್ಲಿ ಪೀಠದ ಮೇಲೆ ಕುಳಿತಿರುವ ಶಿವನ ಶಿಲ್ಪವನ್ನು ಕಾಣಬಹುದು. ಶಿವನು ನಾಲ್ಕು ಕೈಗಳನ್ನು ಹೊಂದಿದ್ದು ತ್ರಿಶೂಲ, ಕಟುವಂಗ, ಅಕ್ಷಮಾಲೆ ಹಿಡಿದು ಕುಳಿತಿರುವಂತೆ ಕೆತ್ತಲಾಗಿದೆ. ಇದರ ಪೀಠದಲ್ಲಿ ಹೂಬಳ್ಳಿಗಳಿಂದ ಅಲಂಕರಿಸಿದ್ದು, ಶೃಂಗಾರಮಯವಾಗಿ ಕೆತ್ತಲಾಗಿದೆ.

**ವಿಷ್ಣು:** ಈ ದೇವಾಲಯದ ಭಿತ್ತಿಯಲ್ಲಿ ಯೋಗ ಮಾಡುತ್ತಿರುವ ವಿಷ್ಣುವನ್ನು ಕಾಣಬಹುದು. ನಾಲ್ಕು ಕೈಗಳನ್ನು ಹೊಂದಿದ್ದು ಗದಾ, ಶಂಖ, ಹಿಡಿದಿರುವಂತೆ ಕೆತ್ತಲಾಗಿದೆ. ಈ ಶಿಲ್ಪವು ಅಪೂರ್ಣವಾಗಿದೆ.

**ಅರ್ಜುನ:** ಕೇದಾರೇಶ್ವರ ದೇವಾಲಯದಲ್ಲಿ ಅರ್ಜುನನು ಬಾಣ ಬಿಡುತ್ತಿರುವ ದೃಶ್ಯ ಹೊಯ್ಸಳರ ವಾಸ್ತು ಶಿಲ್ಪದ ಅತ್ಯುನ್ನತ ಕಲಾತ್ಮಕ ಶಿಲ್ಪವೆಂದೇ ಹೇಳಬಹುದು. ಅರ್ಜುನನು ಮೀನಿನ ಕಣ್ಣಿಗೆ ಬಾಣವನ್ನು, ಗುರಿಯಿಟ್ಟು ಬಿಡುತ್ತಿರುವ ಕೆತ್ತನೆಯನ್ನು ನಾವು ಸಂಪೂರ್ಣವಾಗಿ ಕಾಣಬಹುದು. ಪೀಠ ಮತ್ತು ಕೀರ್ತಿಮುಖವನ್ನು ಹೂಬಳ್ಳಿಗಳಿಂದ ಕೆತ್ತಲಾಗಿದೆ.

**ಗಣಪತಿ:** ಕೇದಾರೇಶ್ವರ ದೇವಾಲಯದಲ್ಲಿ ಗಣಪತಿ ಶಿಲ್ಪವನ್ನು ಕಾಣಬಹುದು. ಗಣಪತಿ ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ಕೈಯಲ್ಲಿ ಪರಶು, ಮೋದಕ ಆಯುಧಗಳನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಹಾಗೂ ಪೀಠದಲ್ಲಿ ಇಲಿಯನ್ನು ಕೆತ್ತಿ ವಾಹನ ರೂಢನಾಗಿರುವಂತೆ ಹಾಗೂ ಕೀರ್ತಿಮುಖದ ಭಾಗವನ್ನು ಹೂಬಳ್ಳಿಗಳಿಂದ ಕೆತ್ತಲಾಗಿದೆ.

**ಭೈರವ:** ಈ ದೇವಾಲಯದ ಭಿತ್ತಿಯಲ್ಲಿ ಭೈರವನ ಶಿಲ್ಪವನ್ನು ಕಾಣಬಹುದು. ಭೈರವನು ನಾಲ್ಕು ಕೈಗಳನ್ನು ಹೊಂದಿದ್ದು ಕಟುವಂಗ, ಡಮರುಗ, ರುಂಡ, ಹಿಡಿದಿರುವಂತೆ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಭೈರವನ ಪಾದರಕ್ಷೆಗಳನ್ನು, ಜಡೆಯನ್ನು ಸಹ ಕೆತ್ತಲಾಗಿದೆ. ಪೀಠವನ್ನು ಹೂಬಳ್ಳಿಗಳಿಂದ ಅಲಂಕರಿಸಿರುವುದನ್ನು ನೋಡಬಹುದು.

**ನಂದಿ ಮೇಲೆ ಕುಳಿತಿರುವ ಶಿವ:** ಕೇದಾರೇಶ್ವರ ದೇವಾಲಯದಲ್ಲಿ ನಂದಿಯ ಮೇಲೆ ಕುಳಿತಿರುವ ಶಿವನ ಶಿಲ್ಪವನ್ನು ನೋಡಬಹುದು. ಈ ಶಿಲ್ಪವನ್ನು ಪೀಠದ ಮೇಲೆ ಕೆತ್ತಲಾಗಿದೆ. ಶಿವನು ಎರಡು ಕೈಗಳಲ್ಲಿ ಅಂಕುಶ, ತ್ರಿಶೂಲ, ಹಿಡಿದು ಕುಳಿತಿರುವಂತೆ ಕೆತ್ತಲಾಗಿದೆ. ಪೀಠದ ಮೇಲಿನ ಭಾಗವನ್ನು ಹೂಬಳ್ಳಿಗಳಿಂದ ಕೆತ್ತಲಾಗಿದೆ. (ಚಿತ್ರಸಂಖ್ಯೆ–೨೪)

**ಭೃಂಗಿ:** ಅಸ್ಥಿಪಂಜರ ರೂಪದಲ್ಲಿರುವ ಶಿವನ ಭಕ್ತನಾದ ಭೃಂಗಿ ಶಿಲ್ಪವನ್ನು ಕೆತ್ತಲಾಗಿದೆ.ನಾಲ್ಕು ಕೈಗಳನ್ನು ಹೊಂದಿದ್ದು, ಮೂರು ಕಾಲುಗಳನ್ನು ನೊಡಬಹುದು.ಪೀಠದ ಭಾಗವನ್ನು ಹೂಬಳ್ಳಿಗಳಿಂದ ಕೆತ್ತಲಾಗಿದೆ.

**ಕಪಾಲಧಾರಿ ಶಿವ:** ಈ ದೇವಾಲಯದ ಭಿತ್ತಿಯಲ್ಲಿ ಕಪಾಲಧಾರಿ ಶಿವನ ಶಿಲ್ಪವನ್ನು ಕಾಣಬಹುದು. ನಾಲ್ಕು ಕೈಗಳನ್ನು ಹೊಂದಿದ್ದು, ಕಪಾಲಿ, ಮೃಗ, ಡಮರುಗ, ಮತ್ತು ಅಂಕುಶವನ್ನು ಹಡಿದಿರುವ ಶಿಲ್ಪವನ್ನು ನೋಡಬಹುದು, ಈ ಶಿಲ್ಪವೂ ಅಪೂರ್ಣವಾಗಿದೆ.

**ಶಿವ:** ಕೇದಾರೇಶ್ವರ ದೇವಾಲಯದಲ್ಲಿ ಶಿವನ ಶಿಲ್ಪವನ್ನು ಕೆತ್ತಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಪರಶು, ಮೃಗ, ಅಭಯ ಹಸ್ತ ಹಿಡಿದು ದ್ವಿಭಂಗಿಯಲ್ಲಿರುವ ಶಿವನ ಶಿಲ್ಪವನ್ನು ಕೆತ್ತಲಾಗಿದೆ. ಪೀಠದಲ್ಲಿ ನಂದಿವಾಹನ ಶಿಲ್ಪವನ್ನು ಕಾಣಬಹುದು. ಕೇದಾರೇಶ್ವರ ದೇವಾಲಯದ ಭಿತ್ತಿಯಲ್ಲಿ ಈ ಶಿಲ್ಪಗಳ ಜೊತೆಗೆ ಕುಭೇರ, ಸರಸ್ವತಿ, ಪಾರ್ವತಿ, ತ್ರಿಪೂರಾಂತಕ,

ಭೈರವ, ದುರ್ಗ, ಇಲಿಯ ಮೇಲೆ ಕುಳಿತಿರುವ ಗಣಪತಿ, ಮಹಿಷಾಸುರ ಮರ್ದಿನಿ, ಉಮಾಮಹೇಶ್ವರಿ ಶಿಲ್ಪಗಳನ್ನು ಕಾಣಬಹುದಾಗಿದೆ. ಒಟ್ಟಾರೆ ಹೇಳುವುದಾದರೆ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಕೇದಾರೇಶ್ವರ ದೇವಾಲಯ ಪ್ರೇಕ್ಷರಿಗೆ ವಿಷೇಶ ಪ್ರೇಕ್ಷಣೀಯ ಸ್ಥಳವಾಗಿದೆ ಹಾಗೂ ಇತಹಾಸ ಅಧ್ಯಯನಕಾರರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**

- ಹಿ.ಶಿ.ರಾಮಚಂದ್ರೇಗೌಡ (ಸಂ), ಕನ್ನಡ ವಿಶ್ವಕೋಶ, ಸಂ–೨, ಮೈಸೂರು ವಿವಿ, ಮೈಸೂರು. ಪುಸಂ ೧೨೯
- ಡಾ.ಎಂ.ಎಸ್.ಕೃಷ್ಣಮೂರ್ತಿ (೨೦೦೯), ಹೊಯ್ಸಳ ವಂಶ ವಾಸ್ತುಶಿಲ್ಪ, ಇಲ್ಲಿ ಇತಿಹಾಸ ಮತ್ತು ಪುರಾತತ್ವ ವಿಶ್ವಕೋಶ, , ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಪು.ಸಂ–೧೧೫೧–೧೧೫೨
- ಶೆಟ್ಟಿಕೆರೆ , ಕರ್ನಾಟಕ ವಿಶ್ವಕೋಶ, ಸಂಪುಟ–೨, ಪು.ಸಂ–೧೧೪೯–೧೧೫೧
- ತುಮಕೂರು ಜಿಲ್ಲಾ ಗೆಜೆಟಿಯರ್, ಕರ್ನಾಟಕ ಸರ್ಕಾರ, ಪು.ಸಂ–೩೨–೩೪
- ಡಾ.ಎನ್.ಎಸ್.ರಂಗರಾಜು, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಕಲೆ ಮತ್ತು ವಾಸ್ತುಶಿಲ್ಪ ಪು.ಸಂ ೧೫೯–೧೭೧



ಕೇದಾರೇಶ್ವರ ದೇವಾಲಯ



ಗರ್ಭಗೃಹ



ನವರಂಗ



ಕೋಷ್ಟ ಗುಡಿಗಳು





ಸೂರ್ಯ ಶಿಲ್ಪ



ನಂದಿ



ಕಂಬಗಳು

| | | |
|---|---|---|
|  ವಿಷ್ಣು |  ಬ್ರಹ್ಮ |  ಸರಸ್ವತಿ |
|  ಜಗತಿ |  ದ್ವಾರಬಂದಗಳು |  ಶಿವ |
|  ಅರ್ಜುನ |  ಗಣಪತಿ |  ಬೈರವ |